ಆದುದರಿಂದ, ಒಂದು ವರ್ಷದಲ್ಲಿ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ. ಮೇಲ್ಮನೆ ಮತ್ತು ಕೆಳಮನೆ ಸದಸ್ಯರ ಜಂಟಿ ಸಮಿತಿಗಳೇನಿವೆ, ಅವು ಇಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆಂದು ತಮ್ಮ ಮೂಲಕ ಈ ಪ್ರಸ್ತಾವನೆಯನ್ನು ತಂದಿದ್ದೇನೆಯೇ ಹೊರತು ಬೇರೆ ಉದ್ದೇಶದಿಂದಲ್ಲ. ಅವರು ಕೊಟ್ಟಿರುವ ಸಲಹೆಗಳನ್ನು ತಮ್ಮ ಜೊತೆ ಸಮಾಲೋಚಿಸಿ, ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು :— ಚರ್ಚೆ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಹೇಳುವುದು ಸರಿ. ಫೈನಾನ್ಷಿಯಲ್ ಇಯರ್‌ನಿಂದ ಫೈನಾನ್ಷಿಯಲ್ ಇಯರ್‌ಗೆ ಆಗಬೇಕೆಂಬುವ ಉದ್ದೇಶವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೊನೆಯಲ್ಲಿ ನಾವೇನು ಸಮಿತಿ ರಚಿಸುತ್ತೇವೆ, ಅದಕ್ಕೆ ಮೂರು- ನಾಲ್ಕು ತಿಂಗಳ ಅವಧಿ ಮಾತ್ರ ಇರುತ್ತದೆ. ಎರಡೆಯದಾಗಿ, ಅನೇಕ ಸದಸ್ಯರಿಗೆ ಹೊಸದಾಗಿ ಅವಕಾಶ ಕೊಡಲಿಕ್ಕಾಗುವುದಿಲ್ಲ. ಎಲ್ಲ ಸದಸ್ಯರಿಗೆ ಯಾರು ಬೇಡವೆಂದು ಹೇಳುತ್ತಾರೆಯೋ, ಅವರನ್ನು ಬಿಟ್ಟು, ಯಾರು ಬಯಸುತ್ತಾರೆ, ಅವರಿಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು :— ಅದರ ಬಗ್ಗೆ ಚರ್ಚೆ ಮಾಡೋಣ.

7. ಪ್ರಕಟಣೆ

ಅಧ್ಯಕ್ಷರು :— ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 118ರ ಮೇರೆಗೆ ದಿ: 17-11-00 ರಂದು ಕರ್ನಾಟಕ ವಿಧಾನಪರಿಷತ್ತಿನ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿದೆ."

1) ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ಮತ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000.

2) ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2000.